Chikkamagalure District

Nil

Gulbarga District

1) Cooperation Departmental Employees Credit Coop. Society Ltd., Gulbarga
2) Shabada Cement Employees thrift and credit - " - Shabada

Kolar District

Nil

Tumkur District

1) Tumkur Higher Secondary School - " - Tumkur
2) Government High School Employees - " - Madugeri

Gadag District

1) Davanagere cotton Mills Employees - " - Gadag

ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ ಮಾರಾಟ

1697 (2207) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) - ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಸಹಕಾರಿ ನೂಲಿನ ಗಿರಣಿಯನ್ನು ಖಾಸಗೀಯವರಿಗೆ ಮಾರಾಟ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ ; ಹಾಗೂ ಎಷ್ಟು ಮೊತ್ತಕ್ಕೆ ಮಾರಲಾಗುತ್ತಿದೆ ;

ಆ) ಮಾರಾಟದಿಂದ ಬಂದ ಹಣದಲ್ಲಿ ಗಿರಣಿಯ ಕಾರ್ಮಿಕರ ಪಾಲು ಎಷ್ಟು ;

ಇ) ಈ ಅನುಕೂಲತೆ ಪಡೆಯುವ ಕಾರ್ಮಿಕರ ಸಂಖ್ಯೆ ಎಷ್ಟು ; ಹಾಗೂ ಪ್ರತಿಯೊಬ್ಬರಿಗೆ ದೊರೆಯುವ ಹಣವೆಷ್ಟು ; (ವಿವರಗಳನ್ನು ನೀಡುವುದು) ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ಬಾಗಲಕೋಟೆ ಸಹಕಾರಿ ನೂಲಿನ ಗಿರಣಿಯನ್ನು ಖಾಸಗಿಯವರಿಗೆ ಮಾರಾಟ ಮಾಡುವ ಬಗ್ಗೆ ಬಂದಿರುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ. ಇದೇ ಸಂದರ್ಭದಲ್ಲಿ ಗಿರಣಿಯ ಯಂತ್ರೋಪಕರಣಗಳು ಮತ್ತು ಬಿಡಿ ಭಾಗಗಳು ಕಳ್ಳತನವಾಗಿರುವ ಬಗ್ಗೆ ಕಾರ್ಮಿಕ ಸಂಘದ ಮುಖಂಡರಿಂದ ಲಿಖಿತ ದೂರು ಬಂದಿರುವ ಹಿನ್ನೆಲೆಯಲ್ಲಿ ರಾಜ್ಯ ಸಹಕಾರಿ ನೂಲಿನ ಗಿರಣಿಗಳ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರ ಮುಂದಾಳತ್ವದಲ್ಲಿ ಈ ಬಗ್ಗೆ ಪರಿಶೀಲಿಸಿ ವರದಿ ನೀಡುವ ಬಗ್ಗೆ ಒಂದು ಸಮಿತಿಯನ್ನು ರಚಿಸಿ ವರದಿ ನೀಡುವಂತೆ ಆದೇಶ ಹೊರಡಿಸಲಾಗಿದೆ. ಸಮಿತಿ ವರದಿಯ ನಿರೀಕ್ಷಣೆಯಲ್ಲಿರುವ ಕಾರಣ ಎಷ್ಟು ಮೊತ್ತಕ್ಕೆ ಮಾರಾಟ ಮಾಡಲಾಗುವುದು ಎಂಬ ಬಗ್ಗೆ ಈ ಹಂತದಲ್ಲಿ ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುವುದಿಲ್ಲ.

ಆ) ಮಾರಾಟದಿಂದ ಬಂದ ಹಣವನ್ನು ಗಿರಣಿಯ ಕಾರ್ಮಿಕರ ಪಾಲು ಸುಮಾರು ರೂ. 120.83 ಲಕ್ಷಗಳೆಂದು ಅಂದಾಜು ಮಾಡಲಾಗಿದೆ.

ಇ) ಮಾರಾಟದಿಂದ ಬಂದ ಹಣದಲ್ಲಿ ಅನುಕೂಲತೆಯನ್ನು ಪಡೆಯುವ ಕಾರ್ಮಿಕರ ಸಂಖ್ಯೆ 350 ಎಂದು ಅಂದಾಜು ಮಾಡಲಾಗಿದೆ. ಮಾರಾಟದಿಂದ ಬಂದ ಹಣದಲ್ಲಿ ಪ್ರತಿಯೊಬ್ಬ ಕಾರ್ಮಿಕರ ಪಾಲನ್ನು ನಿಯಮಾನುಸಾರ ನಿರ್ಧರಿಸಲಾಗುವುದು.